# ರಾಷ್ಟ್ರೀಯ ಇಸಿಸಿಇ ಪಠ್ಯಕ್ರಮ ಚೌಕಟ್ಟು

## ೧. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಉದ್ದೇಶಗಳು (ECCE)

ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಗುರಿಯು ಮಗುವಿನಲ್ಲಿ ಇರುವ ಸಂಪೂರ್ಣ ಸಾಮರ್ಥ್ಯವನ್ನು ಅತ್ಯುತ್ತಮವಾಗಿ ಬೆಳೆಯುವಂತೆ ಸುಗಮಗೊಳಿಸುವುದು ಮತ್ತು ಎಲ್ಲ ಕ್ಷೇತ್ರಗಳಲ್ಲಿನ ಬೆಳವಣಿಗೆಗೆ ಮತ್ತು ಜೀವನ ಪರ್ಯಂತದ ಕಲಿಕೆಗೆ ಅಡಿಪಾಯವನ್ನು ಹಾಕುವುದಾಗಿದೆ. ಮಗುವಿನ ಯೋಗಕ್ಷೇಮದ ಮುಖ್ಯ ಜವಾಬ್ದಾರಿಯನ್ನು ಪೋಷಕರು ಮತ್ತು ಮನೆಯವರು ಹೊಂದಿದ್ದರೂ, ಮಗುವಿನ ಯೋಗಕ್ಷೇಮವನ್ನು ಕಾಯಲು ಮತ್ತು ಕೆಳಗಿನ ಉದ್ದೇಶಗಳನ್ನು ಸಾಧಿಸಲು ಸಮುದಾಯ ಮತ್ತು ಇಸಿಸಿಇ (Early Chilhood Care and Education) ಕೇಂದ್ರಗಳ ನಡುವಿನ ಬಲವಾದ ಸಹಯೋಗವು ಮುಖ್ಯವಾಗಿದೆ.

**ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ವಿಶಾಲ ಉದ್ದೇಶಗಳು ಈ ಕೆಳಕಂಡಂತಿವೆ:**

- ಪ್ರತಿಯೊಂದು ಮಗುವಿಗೂ ಪ್ರಾಮುಖ್ಯತೆ ನೀಡಲಾಗಿದೆ, ಗೌರವದಿಂದ ನಡೆಸಿಕೊಳ್ಳಲಾಗಿದೆ, ಸುರಕ್ಷಿತ ಭಾವನೆ ಹೊಂದುವಂತೆ ಮತ್ತು 'ಸ್ವ'ದ ಒಂದು ಸಕಾರಾತ್ಮಕ ಪರಿಕಲ್ಪನೆಯನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು.
- ಪ್ರತಿ ಮಗುವಿನ ಸಾಮರ್ಥ್ಯಕ್ಕೆ ಅನುಗುಣವಾಗಿ, ಅದರ ದೈಹಿಕ ಮತ್ತು ಚಲನಶಕ್ತಿ ಬೆಳವಣಿಗೆಗೆ ಉತ್ತಮ ಅಡಿಪಾಯವನ್ನು ಸಾಧ್ಯಗೊಳಿಸುವುದು.
- ಉತ್ತಮ ಆಹಾರ ಪದ್ಧತಿಗಳು, ಆರೋಗ್ಯ ಅಭ್ಯಾಸಗಳು, ನೈರ್ಮಲ್ಯ ಅಭ್ಯಾಸಗಳು, ಮತ್ತು ಸ್ವ-ಸಹಾಯ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು.
- ಪರಿಣಾಮಕಾರಿ ಸಾಮಾಜಿಕ ಸಂಬಂಧಗಳನ್ನು ಹೊಂದಲು ಮಕ್ಕಳನ್ನು ಸಮರ್ಥರನ್ನಾಗಿಸಿ ಗ್ರಹಣಾಕಾಂಕ್ಷಿ ಮತ್ತು ಅಭಿವ್ಯಕ್ತಿಶೀಲ ಭಾಷಾ ಸಾಮರ್ಥ್ಯ ಹೊಂದುವಂತೆ ಪ್ರೋತ್ಸಾಹಿಸುವುದು.
- ಇಂದ್ರಿಯಗಳ ಬೆಳವಣಿಗೆ ಮತ್ತು ಸಮನ್ವಯವನ್ನು ಉತ್ತೇಜಿಸುವುದು.
- ಬೌದ್ಧಿಕ ಕುತೂಹಲವನ್ನು ಉತ್ತೇಜಿಸುವುದು ಮತ್ತು ಅನ್ವೇಷಣೆ, ಶೋಧನೆ ಮತ್ತು ಪ್ರಯೋಗದ ಅವಕಾಶಗಳನ್ನು ಒದಗಿಸುವ ಮೂಲಕ ಸುತ್ತಲಿನ ಪ್ರಪಂಚದ ಬಗ್ಗೆ ಪರಿಕಲ್ಪನಾತ್ಮಕ ತಿಳುವಳಿಕೆಯನ್ನು ಬೆಳೆಸುವುದು.

- ಸಮಾಜ-ಪರವಾದ ಕೌಶಲ್ಯಗಳು, ಸಾಮಾಜಿಕ ಸಾಮರ್ಥ್ಯ ಮತ್ತು ಸಂವೇಗಾತ್ಮಕ (ಭಾವನಾತ್ಮಕ) ಸೌಖ್ಯತೆಯ ಬೆಳವಣಿಗೆಯನ್ನು ಹೆಚ್ಚಿಸುವುದು.
- ಸೌಂದರ್ಯೋಪಾಸನೆಯ ಪ್ರಜ್ಞೆಯನ್ನು ಬೆಳೆಸುವುದು ಮತ್ತು ಸೃಜನಾತ್ಮಕ ಕಲಿಕಾ ಪ್ರಕ್ರಿಯೆಗಳನ್ನು ಉತ್ತೇಜಿಸುವುದು.
- ಸಾಂಸ್ಕೃತಿಕವಾಗಿ ಮತ್ತು ಬೆಳವಣಿಗೆಗೆ ಸೂಕ್ತವಾದ ವರ್ತನೆಯನ್ನು ಮತ್ತು ಸಹಜೀವಿಗಳಿಗೆ ಪ್ರಮುಖ ಮಾನವ ಮೌಲ್ಯಗಳಾದ ಗೌರವ ಮತ್ತು ಪ್ರೀತಿಯನ್ನು ತೋರಿಸುವ ಮನೋಭಾವವನ್ನು ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳುವುದು.
- ಮನೆಯಿಂದ ಇಸಿಸಿಇ ಕೇಂದ್ರ ಮತ್ತು ಆನಂತರದ ಔಪಚಾರಿಕ ಶಾಲಾ ಶಿಕ್ಷಣಕ್ಕೆ ಸುಗಮವಾಗಿ ದಾಟುವುದನ್ನು ಸಾಧ್ಯಗೊಳಿಸುವುದು.
- ಒಟ್ಟಾರೆ ವ್ಯಕ್ತಿತ್ವ ಬೆಳವಣಿಗೆಗೆ ವ್ಯಾಪ್ತಿಯನ್ನು ಹೆಚ್ಚಿಸುವುದು.

## ೩. ಆರಂಭಿಕ ಕಲಿಕೆ ಮತ್ತು ಬೆಳವಣಿಗೆಯ ತತ್ತ್ವಗಳು ಮತ್ತು ಅವುಗಳನ್ನು ಕಾರ್ಯರೂಪಕ್ಕೂ ತರುವಲ್ಲಿನ ಸೂಚಿತದ ಪರಿಣಾಮಗಳು

ಆರಂಭಿಕ ವರ್ಷಗಳಲ್ಲಿನ ಕಲಿಕೆ ಮತ್ತು ಬೆಳವಣಿಗೆಗೆ ಸಂಬಂಧಿಸಿದ ತತ್ತ್ವಗಳು ಮತ್ತು ಆಚರಣೆಗಳು ಚಿಂತಕರ ಹೊಳಹು ಮತ್ತು ಅವಲೋಕನಗಳು ಹಾಗೂ ಸಂಶೋಧನೆಗಳ ಪುರಾವೆಗಳನ್ನು ಆಧರಿಸಿವೆ. ಪ್ರತಿಯೊಂದು ತತ್ತ್ವವು ನಿರ್ದಿಷ್ಟ ವಿಚಾರಗಳನ್ನು ವಿವರಿಸುತ್ತವಲ್ಲದೆ ಅವೆಲ್ಲವೂ ಬೆಳವಣಿಗೆಯ ಕ್ಷೇತ್ರಗಳಂತೆಯೇ ಪರಸ್ಪರ ಸಂಬಂಧ ಹೊಂದಿವೆ. ಪ್ರತಿಯೊಂದು ತತ್ತ್ವದ ಪ್ರಾಯೋಗಿಕ ಪರಿಣಾಮಗಳು ಸಾಂಸ್ಕೃತಿಕ ಮತ್ತು ವ್ಯಕ್ತಿಗತ ಪೂರ್ವಾಪೇಕ್ಷಿತ ಅಗತ್ಯತೆಗಳಿಂದಲೂ ಸಹ ಪ್ರಭಾವಿತವಾಗಿರುತ್ತವೆ.

### ೩.೧ ಬೆಳವಣಿಗೆ ಮತ್ತು ಕಲಿಕೆಯು ಎಲ್ಲ ಕ್ಷೇತ್ರಗಳಲ್ಲೂ ನಡೆಯುತ್ತವೆ. ಒಂದು ಕ್ಷೇತ್ರದಲ್ಲಿನ ಬೆಳವಣಿಗೆಯು ಇನ್ನೊಂದು ಕ್ಷೇತ್ರದ ಮೇಲೆ ಪ್ರಭಾವ ಬೀರುತ್ತದೆ

ಮಕ್ಕಳು ಆಲೋಚಿಸುವ, ಭಾವಿಸುವ ಮತ್ತು ಅಂತರಕ್ರಿಯೆಯಲ್ಲಿ ತೊಡಗುವ ಮನುಷ್ಯರಾಗಿರುತ್ತಾರೆ ಮತ್ತು ಅವರ ಬೆಳವಣಿಗೆಗಾಗಿ ಎಲ್ಲ ಕ್ಷೇತ್ರಗಳನ್ನೂ ಉದ್ದೇಶಿವುದು ಮುಖ್ಯವಾಗಿದೆ. ಒಂದು ಕ್ಷೇತ್ರದಲ್ಲಿನ ಬದಲಾವಣೆಗಳು ಅಥವಾ ಬೆಳವಣಿಗೆಯು ಮತ್ತೊಂದು ಕ್ಷೇತ್ರದ ಬೆಳವಣಿಗೆಯನ್ನು ಸುಗಮಗೊಳಿಸುತ್ತದೆ ಅಥವಾ ತಡೆಯುತ್ತದೆ.

**೩.೨ ಮಕ್ಕಳ ಬೆಳವಣಿಗೆ ಮತ್ತು ಕಲಿಕೆಯು ಒಂದು ಅನುಕ್ರಮವನ್ನು ಅನುಸರಿಸುತ್ತದೆ. ಈ ಅನುಕ್ರಮದಲ್ಲಿ ಮಕ್ಕಳಿಗೆ ಈಗಾಗಲೇ ತಿಳಿದಿರುವ ಮತ್ತು ಅನ್ವಯಿಸಲು ಕಲಿತಿರುವ ಜ್ಞಾನದ ಮೇಲೆ ಅವರು ಅನಂತರದಲ್ಲಿ ಹೊಂದುವ ಸಾಮರ್ಥ್ಯಗಳು (ಕೌಶಲ್ಯಗಳು ಮತ್ತು ಪರಿಕಲ್ಪನೆಗಳು) ನಿರ್ಮಿತವಾಗುತ್ತವೆ**

ಜೀವನದ ಮೊದಲ ಕೆಲವು ವರ್ಷಗಳಲ್ಲಿ ಬೆಳವಣಿಗೆ, ಬದಲಾವಣೆ ಮತ್ತು ವಿಕಸನವು ಬಹುತೇಕವಾಗಿ ನಿರೀಕ್ಷಿಸಿದ ಮಾದರಿಯನ್ನು ಅನುಸರಿಸುತ್ತದೆ; ಆದಾಗ್ಯೂ, ಈ ಬದಲಾವಣೆಗಳು ಅಭಿವ್ಯಕ್ತವಾಗುವ ವಿಧಾನವು ವಿಭಿನ್ನ ಸಂದರ್ಭ ಮತ್ತು ಸಂಸ್ಕೃತಿಗಳಿಗೆ ಅನುಗುಣವಾಗಿ ಭಿನ್ನವಾಗಿರುತ್ತದೆ. ಬೆಳವಣಿಗೆಯ ಬಗೆಗಿನ ತಿಳಿದಿರುವ ಅನುಕ್ರಮದ ಜ್ಞಾನವು ಮಕ್ಕಳಿಗೆ ಆರಂಭಿಕ ಉತ್ತೇಜಕ ಚಟುವಟಿಕೆಗಳು ಮತ್ತು ಪಠ್ಯಕ್ರಮದ ಯೋಜನೆಯನ್ನು ರೂಪಿಸಲು ಅನುವು ಮಾಡಿಕೊಡುತ್ತದೆ.

**೩.೩ ಮಕ್ಕಳ ಬೆಳವಣಿಗೆ ಮತ್ತು ಕಲಿಕೆಯು ವ್ಯಕ್ತಿಗತ ವ್ಯತ್ಯಾಸದಿಂದ ನಿರೂಪಿಸಲ್ಪಟ್ಟಿರುತ್ತದೆ**

ಕಲಿಕೆ ಮತ್ತು ಬೆಳವಣಿಗೆಯು ಒಂದು ನಿರೀಕ್ಷಿಸಬಹುದಾದ ಮಾದರಿಯನ್ನು ಅನುಸರಿಸುತ್ತದೆಯಾದರೂ ರೂಢಿಗತ ಬೆಳವಣಿಗೆಯ ಅವಧಿಯಲ್ಲಿ ಮತ್ತು ಓರ್ವ ವ್ಯಕ್ತಿಯಾಗಿ ಪ್ರತಿ ಮಗುವಿನ ವಿಶಿಷ್ಟತೆಯಲ್ಲಿ ವೈಯಕ್ತಿಕ ವ್ಯತ್ಯಾಸವು ಇರಬಹುದು. ಒಂದೇ ಕುಟುಂಬದವರಾಗಿದ್ದರೂ ಸಹ, ಯಾವುದೇ ಎರಡು ಮಕ್ಕಳು, ಒಂದೇ ರೀತಿ ಇರುವುದಿಲ್ಲ. ಪ್ರತಿಯೊಂದು ಮಗುವಿಗೂ ಬೆಳವಣಿಗೆ ಮತ್ತು ಬೆಳವಣಿಗೆಯ ವ್ಯಕ್ತಿಗತ ಮಾದರಿ ಮತ್ತು ಸಮಯ ಹಾಗೂ ಕಲಿಕೆಯ ವ್ಯಕ್ತಿಗತ ಶೈಲಿಗಳಿರುತ್ತವೆ. ಪ್ರತಿಯೊಂದು ಮಗುವಿಗೂ ತನ್ನದೇ ಆದ ಸಾಮರ್ಥ್ಯವಿರುತ್ತದೆ.

**೩.೪ ಮಕ್ಕಳು ಸಮಗ್ರವಾಗಿ ಬೆಳವಣಿಗೆ ಹೊಂದುತ್ತಾರೆ ಮತ್ತು ಅನುಭವದ ಮೂಲಕ ಪಡೆಯುವ ಕಲಿಕೆಯಿಂದ ಪ್ರಯೋಜನ ಪಡೆಯುತ್ತಾರೆ**

ಇದರ ಮೂಲ ಅರ್ಥವೇನೆಂದರೆ, ಮಕ್ಕಳು ಗ್ರಹಿಕೆಯ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸ್ಪರ್ಶ, ರುಚಿ, ವಾಸನೆಯಂತಹ ಇಂದ್ರಿಯಗಳನ್ನು ಮತ್ತು ಕುಶಲತೆಯನ್ನು ಬಳಸಿಕೊಂಡು ಸಕ್ರಿಯ ಪರಿಶೋಧನೆಯ ಮೂಲಕ ಉತ್ತಮವಾಗಿ ಕಲಿಯುತ್ತಾರೆ. ವಿವಿಧ ಕ್ಷೇತ್ರಗಳನ್ನು ಅನ್ವೇಷಿಸಲು ಮತ್ತು ಅವುಗಳಲ್ಲಿ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಮಕ್ಕಳು ಹೆಚ್ಚಿನ ಪ್ರೇರಣಾತ್ಮಕ ಮತ್ತು ಸಕಾರಾತ್ಮಕ ಮನೋಭಾವದೊಂದಿಗೆ ಸಕ್ರಿಯವಾಗಿ ತಮ್ಮ ಕಲಿಕೆಯಲ್ಲಿ ಆಸಕ್ತಿ ಹೊಂದಬೇಕು ಮತ್ತು ತೊಡಗಿಸಿಕೊಳ್ಳಬೇಕು.

## ೩.೫ ಹುಟ್ಟಿನಿಂದಲೇ ಕಲಿಕೆ ಪ್ರಾರಂಭವಾಗುತ್ತದೆ

ಹುಟ್ಟಿನಿಂದಲೇ ಮಕ್ಕಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಕ್ರಿಯಾಶೀಲರಾಗಿರುತ್ತಾರೆ. ಅವರು ತಮ್ಮ ಎಲ್ಲ ಇಂದ್ರಿಯಗಳು ಮತ್ತು ಉತ್ತೇಜನಗಳ ಮೂಲಕ ಕಲಿಯುತ್ತಾರೆ. ಆರಂಭಿಕ ಆರೈಕೆ ಮತ್ತು ಉತ್ತೇಜನೆಗಳು ಸಕಾರಾತ್ಮಕ ಅಥವಾ ನಕಾರಾತ್ಮಕವಾಗಿದ್ದರೂ ಮಕ್ಕಳ ಬೆಳವಣಿಗೆಯ ಮೇಲೆ ಸಂಚಿತ ಪ್ರಭಾವವನ್ನು ಹೊಂದಿರುತ್ತವೆ. ಆರೈಕೆ ಮತ್ತು ಆರಂಭಿಕ ಉತ್ತೇಜನವು ಮೆದುಳಿನ ಬೆಳವಣಿಗೆಯನ್ನು ಉತ್ತೇಜಿಸುವುದರಿಂದ ಮತ್ತು ಅದು ನರಸಂಬಂಧಗಳನ್ನು ರೂಪಿಸಲು ಕಾರಣವಾಗುವುದರಿಂದ ಆರಂಭಿಕ ವರ್ಷಗಳಲ್ಲಿ ಮಕ್ಕಳಿಗೆ ಅತ್ಯುತ್ತಮ ಉತ್ತೇಜನವನ್ನು ಒದಗಿಸಿ ದೀರ್ಘಾವಧಿಯಲ್ಲಿ ಸಂಚಿತ ಕೊರತೆಯನ್ನು ತಡೆಯುವುದು ಅತ್ಯಗತ್ಯವಾಗಿರುತ್ತದೆ.

## ೩.೬ ಜೈವಿಕ ಪಕ್ವತೆ ಮತ್ತು ಅನುಭವದ ನಿರಂತರ ಅಂತರಕ್ರಿಯೆಯಿಂದ ಬೆಳವಣಿಗೆ ಮತ್ತು ಕಲಿಕೆಯು ಸಾಧ್ಯವಾಗುತ್ತದೆ

ಮಗುವು ಅದರ ಆರೋಗ್ಯಕರ ಬೆಳವಣಿಗೆಯನ್ನು ನಿರೀಕ್ಷಿಸಬಲ್ಲಂತಹ ಅನುವಂಶಿಕ ಸಹಜಗುಣಗಳನ್ನು ಹೊಂದಿರುತ್ತದೆ. ಆದರೆ ಜೀವನದ ಆರಂಭಿಕ ವರ್ಷಗಳಲ್ಲಿನ ಅಸರ್ಪಕ ಪೋಷಣೆಯು ಈ ಸಾಧ್ಯತೆಯನ್ನು ತಡೆಯುತ್ತದೆ. ಮತ್ತೊಂದೆಡೆ, ಮಗುವು ಹುಟ್ಟಿನಿಂದಲೇ ಯಾವುದಾದರೂ ಸಮಸ್ಯೆಯಿಂದ ಬಳಲುತ್ತಿದ್ದರೆ ಆಗ ವ್ಯವಸ್ಥಿತ, ವ್ಯಕ್ತಿಗತದ ಹಸ್ತಕ್ಷೇಪದ ಮೂಲಕ ಕಲಿಕೆ ಮತ್ತು ಬೆಳವಣಿಗೆಯ ಮೇಲಾಗುವ ಹಾನಿಕಾರಕ ಪರಿಣಾಮವನ್ನು ಕಡಮೆ ಮಾಡಬಹುದು. ಈ ದೃಷ್ಟಿಕೋನವನ್ನು ಮನಸ್ಸಿನಲ್ಲಿಟ್ಟುಕೊಂಡು, ಆರಂಭಿಕ ಬಾಲ್ಯಾವಸ್ಥೆಯ ಶಿಕ್ಷಣತಜ್ಞರು ಹೆಚ್ಚಿನ ನಿರೀಕ್ಷೆಗಳನ್ನು ಕಾಯ್ದುಕೊಂಡು, ತಮ್ಮ ಎಲ್ಲ ಜ್ಞಾನ, ಜಾಣ್ಮೆ ಮತ್ತು ಪರಿಶ್ರಮವನ್ನು ಬಳಸಿಕೊಂಡು ಪ್ರತಿ ಮಗುವೂ ಯಶಸ್ವಿಯಾಗುವಂತೆ ಸಹಾಯ ಮಾಡುವ ಮಾರ್ಗಗಳನ್ನು ಕಂಡುಕೊಳ್ಳುವುದು ಮುಖ್ಯವಾಗಿದೆ.

## ೩.೭ ಬೆಳವಣಿಗೆಯಲ್ಲಿ ನಿರ್ಣಾಯಕ ಅವಧಿಗಳಿವೆ

ಬೆಳವಣಿಗೆಯ ಕೆಲವು ಅಂಶಗಳು ಜೀವಿತಾವಧಿಯ ಕೆಲವು ಹಂತಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಸಂಭವಿಸುತ್ತವೆ ಎಂದು ಸಂಶೋಧನಾ ಪುರಾವೆಗಳು ಬಹಿರಂಗಪಡಿಸುತ್ತವೆ. ಉದಾಹರಣೆಗೆ, ಜೀವನದ ಮೊದಲ ಮೂರು ವರ್ಷಗಳು ಮಕ್ಕಳಲ್ಲಿ ಮೌಖಿಕ ಭಾಷೆಯ ಬೆಳವಣಿಗೆಗೆ ಅನುಕೂಲಕರವಾದ ಅವಧಿ. ಹಾಗೆಯೇ 3-5 ವರ್ಷಗಳ ಅವಧಿಯಲ್ಲಿ ಸಮಾನಸ್ಕಂದರೊಡನೆ ಅಂತರಕ್ರಿಯೆಯಲ್ಲಿ ತೊಡಗಲು ಸಾಧ್ಯವಾಗಿಸುವ ಸಾಮಾಜಿಕ ಕೌಶಲ್ಯಗಳು ಪರಿಣಾಮಕಾರಿಯಾಗಿ

ಬೆಳೆಯುತ್ತವೆ. ಆದ್ದರಿಂದ ಈ "ಅವಕಾಶದ ಕಾಲಾವಧಿಗಳನ್ನು" ಬಳಸಿಕೊಂಡು ಅಪೇಕ್ಷಿತ ಫಲಿತಾಂಶಗಳನ್ನು ಪಡೆಯುವ ಉದ್ದೇಶದಿಂದ ಒಂದು ನಿರ್ದಿಷ್ಟ ರೀತಿಯ ಕಲಿಕೆಗೆ ಮತ್ತು ಬೆಳವಣಿಗೆಯ "ಪರಮಾವಧಿಯ ಕಾಲದಲ್ಲಿ" ಅಗತ್ಯವಾದ ಪರಿಸರಾತ್ಮಕ ಒಳಸುರಿಗಳು ಮತ್ತು ಬೆಂಬಲವನ್ನು ಮಕ್ಕಳು ಪಡೆಯುತ್ತಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮುಖ್ಯವಾಗಿದೆ.

**೩.೮ ಮಕ್ಕಳ ಕಲಿಕೆಯು ಅರಿವಿನಿಂದ ಪ್ರಾರಂಭವಾಗಿ, ಅನ್ವೇಷಣೆ, ಪರಿಶೋಧನೆ, ಮತ್ತು ಅಂತಿಮವಾಗಿ ಅನ್ವಯಿಕೆಯಲ್ಲಿ ಪರಿಣಮಿಸುವ ಪುನರಾವರ್ತಿತ ಸುರುಳಿಯನ್ನು ಪ್ರತಿಬಿಂಬಿಸುತ್ತದೆ**

ಮಕ್ಕಳು ಗಳಿಸಿಕೊಳ್ಳುವ ಯಾವುದೇ ಹೊಸ ಕಲಿಕೆಯು ಅರಿವಿನೊಂದಿಗೆ ಪ್ರಾರಂಭವಾಗುತ್ತದೆ. ಈ ಅರಿವು ವಸ್ತುಗಳು, ಘಟನೆಗಳು, ಅಥವಾ ಜನರೊಂದಿಗಿನ ಅವರ ಅನುಭವಗಳಿಂದ ಉಂಟಾಗಿ, ಬಳಕೆಯೊಂದಿಗೆ ಅಂತ್ಯವಾಗುತ್ತದೆ. ಈ ಅರಿವಿನ ಮೂಲಕ ಮಕ್ಕಳು ತಾವು ಕಲಿತದ್ದನ್ನು ಬಹು ಉದ್ದೇಶಗಳಿಗಾಗಿ ಬಳಸಲು ಮತ್ತು ಹೊಸ ಸನ್ನಿವೇಶಗಳಿಗೆ ತಮ್ಮ ಕಲಿಕೆಯನ್ನು ಅನ್ವಯಿಸಲು ಸಾಧ್ಯವಾಗುತ್ತದೆ. ಈ ಹಂತದಲ್ಲಿ ಮಕ್ಕಳು ಮುಂದಿನ ಹಂತದ ಮಾಹಿತಿಯನ್ನು ಅನ್ವೇಷಿಸಲು ಪ್ರಾರಂಭಿಸುತ್ತಾರೆ ಮತ್ತು ಸುರುಳಿಯು ಹಾಗೇ ಮುಂದುವರೆಯುತ್ತದೆ. ವಿಶೇಷ ಚೇತನ ಮಕ್ಕಳು ಹೆಚ್ಚಿನ ಪ್ರಮಾಣದ ವ್ಯಕ್ತಿಗತ ವ್ಯತ್ಯಾಸಗಳನ್ನು ತೋರಿಸುತ್ತಾರೆ ಮತ್ತು ಅಂತಹ ಮಕ್ಕಳ ಬೆಳವಣಿಗೆಗೆ ಸೂಕ್ತವಾದ ಸಾಮಗ್ರಿಗಳು ಮತ್ತು ಅನುಭವಗಳನ್ನು ಒದಗಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಪಠ್ಯಕ್ರಮವು ಸೂಕ್ತವಾದ ರೂಪಾಂತರಗಳನ್ನು ಮಾಡಿಕೊಳ್ಳಬೇಕು.

**೩.೯ ಮಕ್ಕಳು ಉತ್ತೇಜಕ/ ಪೋಷಿತ/ ಬೆಂಬಲಿತ/ ಸುರಕ್ಷಿತ ವಾತಾವರಣದಲ್ಲಿ ಕಲಿಯುತ್ತಾರೆ ಮತ್ತು ಬೆಳೆಯುತ್ತಾರೆ**

ಜೀವನದ ಆರಂಭಿಕ ವರ್ಷಗಳಲ್ಲಿ, ಮಕ್ಕಳು ಇಂದ್ರಿಯ ಸಂವೇದನೆ ಅಥವಾ ವರ್ತನಾ ಪ್ರತಿಕ್ರಿಯೆಗಳಿಂದ ಸಾಂಕೇತಿಕ ಅಥವಾ ಪ್ರಾತಿನಿಧ್ಯಕ ಜ್ಞಾನದೆಡೆಗೆ ಚಲಿಸುತ್ತಾರೆ. ಅವರು ಸಾಮಾಜಿಕ ಸನ್ನಿವೇಶಗಳಿಂದ ಮತ್ತು ಇತರ ಮಕ್ಕಳು, ವಯಸ್ಕರು ಮತ್ತು ಅವರ ಸುತ್ತಲಿನ ವಸ್ತುಗಳೊಂದಿಗಿನ ಅರ್ಥಪೂರ್ಣ ಒಡನಾಟಗಳಿಂದ ಕಲಿಯುತ್ತಾರೆ. ಆರಂಭಿಕ ವರ್ಷಗಳಾದ್ಯಂತ ವಯಸ್ಕರು ಪೋಷಿಸುವ ವಾತಾವರಣವನ್ನು ಒದಗಿಸಬೇಕು ಮತ್ತು ಮಕ್ಕಳಿಗೆ ಅನುಭೂತಿ ಮತ್ತು ಸಹಕಾರ, ಸಾಂಸ್ಕೃತಿಕ ಸಾಮಾಜಿಕೀಕರಣ ಮತ್ತು ಸ್ವಯಂ ನಿಯಂತ್ರಣ, ಭಾಷಾರ್ಜನೆ ಮತ್ತು ಸಾಮಾಜಿಕ ಸಂವಾದ, ಸಮಾನಸ್ಕಂದರೊಂದಿಗಿನ ಸಂಬಂಧಗಳು, 'ಸ್ವ'ದ ಪರಿಕಲ್ಪನೆ ಮತ್ತು ಅಸ್ಮಿತೆಯ ರಚನೆಗಳನ್ನು

ಬೆಳೆಸಿಕೊಳ್ಳುವುದನ್ನು ಕಲಿಯಲು ಸಹಾಯ ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕು.

## ೩.೧೦ ಬೆಳವಣಿಗೆ ಮತ್ತು ಕಲಿಕೆಯು ಮಕ್ಕಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಿಂದ ಹೆಚ್ಚಾಗಿ ಪ್ರಭಾವಿತವಾಗಿರುತ್ತದೆ

ಮಕ್ಕಳ ಬೆಳವಣಿಗೆ ಮತ್ತು ಕಲಿಕೆಯು ಜೊತೆಜೊತೆಗೆ ಸಾಗುತ್ತವೆ ಮತ್ತು ಇದು ಹೆಚ್ಚಾಗಿ ಮಗುವಿನ ಕುಟುಂಬ, ನೆರೆಯ ಪರಿಸರ, ಸಮುದಾಯ ಮತ್ತು ವಿಶಾಲ ಮಟ್ಟದಲ್ಲಿ ಸಮಾಜದ ಪ್ರಭಾವದ ಮೇಲೆ ಅವಲಂಬಿತವಾಗಿರುತ್ತದೆ. ಪ್ರತಿಯೊಂದು ಸಂಸ್ಕೃತಿಯು ತನ್ನದೇ ಆದ ರೂಢಿಗಳು, ರಚನೆಗಳು ಮತ್ತು ನಡವಳಿಕೆಗಳನ್ನು ಹೊಂದಿರುತ್ತದೆ ಮತ್ತು ಪ್ರತಿಯೊಂದು ಸಂಸ್ಕೃತಿಯು ತನ್ನದೇ ಆದ ರೀತಿಯಲ್ಲಿ ಮಕ್ಕಳ ವರ್ತನೆ ಮತ್ತು ಬೆಳವಣಿಗೆಯನ್ನು ಅರ್ಥೈಸುವ ತನ್ನದೇ ಆದ ರೀತಿಯನ್ನು ಹೊಂದಿರುತ್ತದೆ. ಶಿಕ್ಷಣತಜ್ಞರು ತಮ್ಮದೇ ಆದ ಸಂಸ್ಕೃತಿಯು ಅವರ ಚಿಂತನೆಯನ್ನು ಹೇಗೆ ರೂಪಿಸಿದೆ ಎಂಬುದರ ಬಗ್ಗೆ ಸೂಕ್ಷ್ಮಮತಿಗಳಾಗಿರಬೇಕು ಮತ್ತು ವಿವಿಧ ಮಕ್ಕಳು ವಾಸಿಸುವ ಬಹುವಿಧದ ಪರಿಸರಗಳನ್ನು ಪರಿಗಣಿಸಬೇಕು ಮತ್ತು ಮಕ್ಕಳ ಬೆಳವಣಿಗೆ ಹಾಗೂ ಕಲಿಕೆಯ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ಅವುಗಳನ್ನು ಹೇಗೆ ಪರಿಗಣಿಸಬೇಕು ಎಂಬುದನ್ನು ತಿಳಿದಿರಬೇಕು.

## ೩.೧೧ ಮಕ್ಕಳಲ್ಲಿ ಕುತೂಹಲ ಮತ್ತು ಕಲಿಯುವ ಬಯಕೆ ಇರುತ್ತದೆ:

ಮಕ್ಕಳು ಸಹಜವಾಗಿ ಕುತೂಹಲ ಹೊಂದಿರುತ್ತಾರೆ ಮತ್ತು ಅವರಲ್ಲಿ ಕಲಿಯಲು ಸಹಜವಾದ ಬಯಕೆ ಇರುತ್ತದೆ. ಮಕ್ಕಳು ತಮ್ಮ ಸುತ್ತಲಿನ ಆಗು-ಹೋಗುಗಳನ್ನು ಗಮನಿಸುತ್ತಾರೆ, ಅವರು ಕಂಡುಕೊಂಡ ವಿಷಯವನ್ನು ಕುರಿತು ಮಾತನಾಡುತ್ತಾರೆ, ಚರ್ಚಿಸುತ್ತಾರೆ ಮತ್ತು ಅವರು ಏನನ್ನು ಕಂಡುಕೊಂಡಿರುತ್ತಾರೋ ಬಗ್ಗೆ ಪರ್ಯಾಲೋಚಿಸುತ್ತಾ, ಸಾಧ್ಯತೆಗಳಿಗಾಗಿ ತಮ್ಮ ಕಲ್ಪನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ, ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಉತ್ತರಗಳನ್ನು ರೂಪಿಸುತ್ತಾರೆ. ಚಿಕ್ಕ ಮಕ್ಕಳು ಅನ್ವೇಷಿಸುವಾಗ ಮತ್ತು ಕಲಿಯುವಾಗ ಅವರ ಜ್ಞಾನವನ್ನು ಮತ್ತು ಪ್ರಪಂಚದ ಬಗೆಗಿನ ತಿಳುವಳಿಕೆಯನ್ನು ರೂಪಿಸಿಕೊಳ್ಳುತ್ತಾರೆ; ಅವರು ಶಿಕ್ಷಕರು, ಕುಟುಂಬದ ಸದಸ್ಯರು, ಗೆಳೆಯರು ಮತ್ತು ಹಿರಿಯ ಮಕ್ಕಳು, ಪುಸ್ತಕಗಳು ಮತ್ತು ಇತರ ಮಾಧ್ಯಮಗಳಿಂದ ಕಲಿಯುತ್ತಾರೆ. ಈ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಉದ್ದೇಶಗಳನ್ನು ಸಾಧ್ಯಗೊಳಿಸಲು ಶಿಕ್ಷಕರು/ ಆರೈಕೆದಾರರು ಮಕ್ಕಳ ವಿವಿಧ ಕಲಿಕಾ ಅಗತ್ಯಗಳನ್ನು ಪೂರೈಸುವಲ್ಲಿ ಬಹು ಬೋಧನಾ ಕಾರ್ಯತಂತ್ರಗಳನ್ನು ಬಳಸಬೇಕು.

**೩.೧೨ ಮಕ್ಕಳು ಆಟದ ಮೂಲಕ ಕಲಿಯುತ್ತಾರೆ:**

ಆಟವು ಮಗುವಿನ ಆರೈಕೆ ಮತ್ತು ಬೆಳವಣಿಗೆಗೆ ಬಹಳ ಮುಖ್ಯವಾದದು. ಮಕ್ಕಳು ಆಡುವ ಸರಳ ಆಟವು ಜ್ಞಾನವನ್ನು ಸೃಷ್ಟಿಸಲು ಅಗತ್ಯವಾದ ಪರಿಶೋಧನೆ, ಪ್ರಯೋಗ, ಕುಶಲತೆ ಮತ್ತು ಸಮಸ್ಯೆಯ ಪರಿಹಾರಕ್ಕೆ ಅವಕಾಶಗಳನ್ನು ಒದಗಿಸುತ್ತದೆ. ಆಟವು ಪ್ರಾತಿನಿಧಿಕ ಮತ್ತು ಅಮೂರ್ತ ಚಿಂತನೆಯ ಬೆಳವಣಿಗೆಗೆ ಕೊಡುಗೆ ನೀಡುತ್ತದೆ. ಮಕ್ಕಳು ವಿವಿಧ ರೀತಿಯ ಆಟಗಳಲ್ಲಿ ತೊಡಗುತ್ತಾರೆ. ಉದಾಹರಣೆಗೆ, ಓಟ, ಜಿಗಿತ ಮುಂತಾದ ಚಲನೆಗಳನ್ನು ಒಳಗೊಳ್ಳುವ ಆಟ, ಭಾಷಾ ಪ್ರಯೋಗದ ಮೂಲಕ ಆಡುವ ಆಟ, ವಸ್ತುವನ್ನು ಬಳಸಿ ಆಡುವ ಆಟ, ನಟನೆ ಅಥವಾ ನಾಟಕೀಯ ಆಟ, ಪರಿಸರ ಮತ್ತು ವಸ್ತುಗಳನ್ನು ಬಳಸಿಕೊಂಡು ಆಡುವ ಆಟ ಮತ್ತು ನಿಯಮಗಳನ್ನು ಹೊಂದಿರುವ ಆಟ. ಇದು ಅವರು ಕಲಿಕೆಗೆ ಹೊಂದಿರುವ ಪ್ರೇರಣೆ, ಮನೋಭಾವ ಮತ್ತು ವಿಧಾನಗಳ ಮೇಲೆ ಮತ್ತಷ್ಟು ಪ್ರಭಾವ ಬೀರುತ್ತದೆ. ಕಲಿಕೆಗೆ ಸಕಾರಾತ್ಮಕ ವಿಧಾನಗಳನ್ನು ರೂಪಿಸುವುದು ಜೀವನದ ನಂತರದ ಶೈಕ್ಷಣಿಕ ಯಶಸ್ಸನ್ನು ನಿರ್ಣಯಿಸುವಲ್ಲಿ ಮಹತ್ತ್ವದ ಪಾತ್ರವನ್ನು ಹೊಂದಿದೆ. ವಯಸ್ಕರು ಮಕ್ಕಳಿಗೆ ಅನ್ವೇಷಿಸಲು, ಆಡಲು ಮತ್ತು ಅನ್ವಯಿಸಲು ಅವಕಾಶಗಳನ್ನು ಒದಗಿಸಬೇಕು.

